50 ಸುವರ್ಣ ಸಂಭ್ರಮ

# ನಿಮ್ಮೊಡನೆ

## ‘ಮಕ್ಕಳ ಶಿಕ್ಷಣ ಹಕ್ಕು’ ಎನ್ನುವ ತುತ್ತೂರಿ

> 2014ರ ಮಕ್ಕಳ ಜನಗಣತಿಯ ಪ್ರಕಾರ, 1 ಲಕ್ಷ 70 ಸಾವಿರಕ್ಕೂ ಹೆಚ್ಚು ಮಕ್ಕಳು ಶಾಲೆಗಳಿಂದ ಹೊರಗಿದ್ದಾರೆ. 2012–13ರಲ್ಲಿ ಈ ಸಂಖ್ಯೆ 22,738ರಷ್ಟಿತ್ತು. ಅಂದರೆ, ಎರಡು ವರ್ಷಗಳ ಅಂತರದಲ್ಲೇ ಶಾಲೆಗಳಿಂದ ಹೊರಗುಳಿದ ಮಕ್ಕಳ ಸಂಖ್ಯೆ ರಾಜ್ಯದಲ್ಲಿ ಸುಮಾರು ಏಳು ಪಟ್ಟು ಹೆಚ್ಚಾಗಿದೆ.

ಮಕ್ಕಳ ಶಿಕ್ಷಣಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚಿನ ಒತ್ತು ನೀಡುತ್ತಿದ್ದರೂ, ಬೀದಿಗಳಲ್ಲಿ–ಮನೆಗಳಲ್ಲಿ ಉಳಿದಿರುವ ಮಕ್ಕಳನ್ನು ಪೂರ್ಣ ಪ್ರಮಾಣದಲ್ಲಿ ಶಾಲೆಗೆ ಕರೆತರುವುದು ಯಾವ ಯೋಜನೆಗಳಿಂದಲೂ ಸಾಧ್ಯವಾಗಿಲ್ಲ. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ನಡೆಸಿರುವ ಇತ್ತೀಚಿನ ಸಮೀಕ್ಷೆಯೊಂದರ ವರದಿ ಕೂಡ ಈ ವಿಪರ್ಯಾಸವನ್ನೇ ಹೇಳುವಂತಿದೆ. 6ರಿಂದ 14 ವರ್ಷದೊಳಗಿನ ಮಕ್ಕಳನ್ನು ಸಮೀಕ್ಷೆಗೆ ಒಳಪಡಿಸಲಾಗಿದ್ದು, ಪ್ರಸ್ತುತ 60.6 ಲಕ್ಷ ಮಕ್ಕಳು ಶಾಲೆಗಳಿಂದ ಹೊರಗುಳಿದಿದ್ದಾರೆ ಎಂದು ಸಮೀಕ್ಷೆ ಹೇಳಿದೆ. ಸಮೀಕ್ಷೆ ಮುಂದಿಟ್ಟಿರುವ ಅಂಕಿ ಅಂಶಗಳಲ್ಲಿ ಒಂದು ಆಶಾಕಿರಣವೂ ಇದೆ. ಅದೆಂದರೆ, 2005 ಮತ್ತು 2009ರ ಅಂಕಿ ಅಂಶಗಳಿಗೆ ಹೋಲಿಸಿದರೆ 2014ರಲ್ಲಿ ಶಾಲೆಯಿಂದ ಹೊರಗುಳಿದಿರುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವುದು. 2005ರಲ್ಲಿ 1.34 ಕೋಟಿ ಮಕ್ಕಳು ಹಾಗೂ 2009ರಲ್ಲಿ 81.5 ಲಕ್ಷ ಮಕ್ಕಳು ಶಾಲೆಗಳಿಂದ ಹೊರಗುಳಿದಿದ್ದರು. ಆ ಪ್ರಮಾಣ ಇದೀಗ 60.6 ಲಕ್ಷಕ್ಕೆ ಬಂದಿಳಿದಿದೆ.


ಬಾಲಕಿಯರಿಗಿಂತಲೂ (28.9 ಲಕ್ಷ) ಬಾಲಕರು (31.6 ಲಕ್ಷ) ಹೆಚ್ಚಿನ ಪ್ರಮಾಣದಲ್ಲಿ ಶಾಲೆ ಬಿಟ್ಟಿರುವುದು ಸಮೀಕ್ಷೆಯಲ್ಲಿನ ಮತ್ತೊಂದು ಮಹತ್ವದ ಸಂಗತಿ. ಹೆಣ್ಣುಮಕ್ಕಳ ಶಿಕ್ಷಣದ ವಿಷಯದಲ್ಲಿ ಪೋಷಕರ ಬದಲಾಗುತ್ತಿರುವ ಮನೋಭಾವವನ್ನು ಈ ಅಂಕಿ ಅಂಶ ಸೂಚಿಸುವಂತಿದೆ. ಇದರ ಜೊತೆಗೆ ಶಾಲೆಗಳಿಂದ ಹೊರಗುಳಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪ್ರಮಾಣ ಕಡಿಮೆಯಾಗಿರುವುದು ಗಮನಾರ್ಹ. ಮುಸ್ಲಿಂ ಸಮುದಾಯದಲ್ಲಿ ಕೂಡ ಮಕ್ಕಳ ಶಿಕ್ಷಣದ ಬಗ್ಗೆ ಜಾಗೃತಿ ಮೂಡುತ್ತಿರುವುದನ್ನು ಸಮೀಕ್ಷೆ ಗುರುತಿಸಿದೆ. 2009ರ ಅಂಕಿ ಅಂಶಗಳ ಹಿನ್ನೆಲೆಯಲ್ಲಿ ಶಾಲೆಗಳಿಂದ ಹೊರಗುಳಿದ ಮಕ್ಕಳ ಸಂಖ್ಯೆಯಲ್ಲಿ ಶೇಕಡಾ 26ರಷ್ಟು ಕಡಿಮೆಯಾಗಿರುವ ಅಂಶಕ್ಕೆ ಸಮೀಕ್ಷೆ ಅಡಿಗೆರೆ ಎಳೆದಿದೆ. ಈ ಕುಸಿತವನ್ನು ‘ಶಿಕ್ಷಣ ಹಕ್ಕು ಕಾಯ್ದೆ’ಯ ಫಲಶ್ರುತಿ ಎನ್ನುವಂತೆ ವಿಶ್ಲೇಷಿಸಲಾಗುತ್ತಿದೆ.

ಆದರೆ, ‘ಶಿಕ್ಷಣ ಹಕ್ಕು ಕಾಯ್ದೆ’ಯ ಯಶಸ್ಸಿನ ಸಮರ್ಥನೆಯಂತೆ ಕಾಣಿಸುತ್ತಿರುವ ಈ ಸಮೀಕ್ಷೆಯಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ನಿರಾಶಾದಾಯಕ ಅಂಕಿ ಅಂಶಗಳಿವೆ. 2014ರ ಮಕ್ಕಳ ಜನಗಣತಿಯ ಪ್ರಕಾರ, 1 ಲಕ್ಷ 70 ಸಾವಿರಕ್ಕೂ ಹೆಚ್ಚು ಮಕ್ಕಳು ಶಾಲೆಗಳಿಂದ ಹೊರಗಿದ್ದಾರೆ. 2012–13ರಲ್ಲಿ ಈ ಸಂಖ್ಯೆ 22,738ರಷ್ಟಿತ್ತು. ಅಂದರೆ, ಎರಡು ವರ್ಷಗಳ ಅಂತರದಲ್ಲೇ ಶಾಲೆಗಳಿಂದ ಹೊರಗುಳಿದ ಮಕ್ಕಳ ಸಂಖ್ಯೆ ರಾಜ್ಯದಲ್ಲಿ ಸುಮಾರು ಏಳು ಪಟ್ಟು ಹೆಚ್ಚಾಗಿದೆ. ಕರ್ನಾಟಕಕ್ಕೆ ಹೋಲಿಸಿದರೆ– ಆಂಧ್ರಪ್ರದೇಶ, ಅಸ್ಸಾಂ, ಬಿಹಾರ, ಜಾರ್ಖಂಡ್, ಮಹಾರಾಷ್ಟ್ರ, ದಿಲ್ಲಿ, ಒಡಿಶಾ, ರಾಜಸ್ತಾನ, ಉತ್ತರಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಶಾಲೆ ಬಿಡುವ ಮಕ್ಕಳ ಸಂಖ್ಯೆ ಕಡಿಮೆ ಪ್ರಮಾಣದಲ್ಲಿದೆ.

ಕರ್ನಾಟಕದಲ್ಲಿ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಲು ‘ಸರ್ವ ಶಿಕ್ಷಣ ಅಭಿಯಾನ’ ಸೇರಿದಂತೆ ಹಲವು ಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆ. ಒಂದನೇ ತರಗತಿಯ ಹೆಣ್ಣುಮಕ್ಕಳಿಗೆ ದಿನವೊಂದಕ್ಕೆ 2 ರೂಪಾಯಿ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಊಟ ನೀಡಲಾಗುತ್ತಿದೆ. ಇಷ್ಟಾದರೂ ಬಡ ಮಕ್ಕಳು, ವಿಶೇಷವಾಗಿ ಹೆಣ್ಣುಮಕ್ಕಳು ಶಾಲೆಗಳಿಂದ ಹೊರಗುಳಿದಿದ್ದಾರೆ. ಬೀದರ್, ಗುಲ್ಬರ್ಗ, ಯಾದಗಿರಿ, ಬಳ್ಳಾರಿ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಂತೂ ಈ ಪ್ರಮಾಣ ಮತ್ತಷ್ಟು ಹೆಚ್ಚು.

ರಾಜ್ಯದಲ್ಲಿನ ಋಣಾತ್ಮಕ ಅಂಕಿ ಅಂಶಗಳ ನಡುವೆಯೂ ದೇಶದಲ್ಲಿ ಒಟ್ಟಾರೆ ಮಕ್ಕಳ ಶಿಕ್ಷಣದ ಕುರಿತು ಉಂಟಾಗಿರುವ ಜಾಗೃತಿಯನ್ನು ಸಚಿವಾಲಯದ ಪ್ರಸಕ್ತ ಸಮೀಕ್ಷೆ ಎತ್ತಿ ಹೇಳುವಂತಿದೆ. ಆದರೆ, ಸರ್ಕಾರಿ ಪ್ರಾಯೋಜಿತ ಸಮೀಕ್ಷೆಗಳ ಅಂಕಿ ಅಂಶಗಳ ವಿಶ್ವಾಸಾರ್ಹತೆಯನ್ನು ಬಹುತೇಕ ಸಂದರ್ಭಗಳಲ್ಲಿ ನಂಬುವುದು ಕಷ್ಟ. ಪ್ರಸಕ್ತ ಸಮೀಕ್ಷೆಯಲ್ಲಿನ ವಿವರಗಳು ಹೇಳುವಂತೆ, ರಾಜ್ಯದಲ್ಲಿ 1.7 ಲಕ್ಷಕ್ಕೂ ಹೆಚ್ಚು ಮಕ್ಕಳು ಶಾಲೆಗಳಿಂದ ವಂಚಿತರು. ಆದರೆ, ಸುಮಾರು 2.24 ಲಕ್ಷ ಮಕ್ಕಳು ಮನೆಗಳಲ್ಲಿ ಅಥವಾ ಬೀದಿಗಳಲ್ಲಿ ಉಳಿದಿದ್ದಾರೆ ಎನ್ನುವುದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಸಮಿತಿ ನಡೆಸಿದ ಗಣತಿಯ ಅಂಕಿ ಅಂಶಗಳ ತಿರುಳು (2013ರ ಡಿಸೆಂಬರ್). ಹೈಕೋರ್ಟ್ ಸೂಚನೆಯ ಮೇರೆಗೆ ನಡೆದಿದ್ದ ಈ ಸಮೀಕ್ಷೆ ವೈಜ್ಞಾನಿಕ ನೆಲೆಗಟ್ಟಿನಲ್ಲಿ ನಡೆದಿದ್ದು, ಹೆಚ್ಚು ವಸ್ತುನಿಷ್ಠವಾಗಿದೆ ಎನ್ನಲಾಗಿತ್ತು. ಇದಕ್ಕೆ ಮೊದಲಿನ ಮತ್ತೊಂದು ಸಮೀಕ್ಷೆಯಲ್ಲಿ ಕೇವಲ 51,994 ಮಕ್ಕಳು ಶಾಲೆಗಳಿಂದ ಹೊರಗುಳಿದಿದ್ದಾರೆ ಎಂದು ಶಿಕ್ಷಣ ಇಲಾಖೆ ಹೇಳಿತ್ತು. ಇಂಥ ಗೊಂದಲಗಳ ಕಾರಣದಿಂದಲೇ, ಸಮೀಕ್ಷೆಗಳು ವಸ್ತುಸ್ಥಿತಿಯ ಪ್ರತಿಬಿಂಬಗಳಿಗಿಂತಲೂ ಹೆಚ್ಚಾಗಿ ವ್ಯವಸ್ಥೆಯ ಹುಳುಕನ್ನು ಮರೆಮಾಚುವ ಪರಿಕರಗಳಾಗಿ ಅಥವಾ ವ್ಯವಸ್ಥೆಯ ತುತ್ತೂರಿಯಾಗಿ ಕಾಣಿಸುತ್ತವೆ. ಮಕ್ಕಳ ಶಿಕ್ಷಣ ಹಕ್ಕು ಸಾಧನೆಗೆ ಪ್ರಸ್ತುತ ಬೇಕಿರುವುದು ಪಾರದರ್ಶಕವಾದ ಹಾಗೂ ಪ್ರಾಮಾಣಿಕವಾದ ಪ್ರಯತ್ನಗಳು.

■ ರಘುನಾಥ ಚ.ಹ.



ಈಶ್ವರ್